†ಶ್ರೀ ವೀರೇಂದ್ರ ಪಾಟೀಲ್.—ಇದು ಮೀಡಿಯಂ ಪ್ರಾಜೆಕ್ಟ್ ಇದೆ. ಇದಕ್ಕೆ ಸುಮಾರು 45 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಅದಕ್ಕಾಗಿ ಇಲ್ಲಿಯವರೆಗೂ ಮೀಡಿಯಂ ಪ್ರಾಜೆಕ್ಟ್ ಕೆಲಸವನ್ನು ಹೊಸದಾಗಿ ತೆಗೆದುಕೊಳ್ಳಬೇಕಾದ್ದನ್ನು ಇನ್ನೂ ವಿಚಾರ ಮಾಡಿಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಇನ್ನೂ ಫೈನಲೈಜ್ ಮಾಡಿಲ್ಲ. ಹೊಸದಾಗಿ ಎಲ್ಲಿಯವರೆಗೆ ಮೀಡಿಯಂ ಮತ್ತು ಮೇಜರ್ ಇರಿಗೇಷನ್ ಪ್ರಾಜೆಕ್ಟ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ತಿಳಿಯದ ವಿನಾ ಈ ತರಹ ಪ್ರಾಜೆಕ್ಟುಗಳನ್ನು ತಯಾರು ಮಾಡುವುದರಲ್ಲಿ ಏನು ರಾಭ ಇಲ್ಲ.

ಶ್ರೀ ಎಫ್. ಎಸ್. ಪಾಟೀಲ್.—ನಾಲ್ಕನೆಯ ಪಂಚವಾರ್ಷಿಕಯೋಜನೆಯಲ್ಲಾದರೂ ಈ ಯೋಜನೆಯನ್ನು ಸೇರಿಸುವ ಭರವಸೆಯನ್ನು ಕೊಡುತ್ತೀರಾ ?

ಶ್ರೀ ವೀರೇಂದ್ರಪಾಟೀಲ್.—ಆ ವಿಚಾರದಲ್ಲಿ ಇವೊತ್ತು ನಾನು ಭರವಸೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಮೂರನೆಯ ಪಂಚವಾರ್ಷಿಕಯೋಜನೆಯಲ್ಲಿ ಅನೇಕ ದೊಡ್ಡ ದೊಡ್ಡ ಜಲಾಶಯಗಳು ಮತ್ತು ಮೀಡಿಯಂ ಜಲಾಶಯಗಳನ್ನು ಕಟ್ಟುವುದಕ್ಕೆ ಕೆಲಸವನ್ನು ಪ್ರಾರಂಭ ಮಾಡಿದೆ. ಎಷ್ಟರಮಟ್ಟಿಗೆ ಹೊಸದಾಗಿ ಆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ನಿರ್ಧಾರಕ್ಕೆ ಬಂದಮೇಲೆ ಹೊಸದಾಗಿ ಏನಾದರೂ ಅಂಥಾ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದ್ದರೆ ಆಗ ಇದನ್ನು ವಿಚಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಲಘಟಗಿ ತಾಲ್ಲೂಕಾದಲ್ಲಿ ಇದುವರೆಗೂ ಸರಕಾರ ಯಾವ ವಿಧವಾದ ನೀರಾವರಿ ಯೋಜನೆಗಳನ್ನು ಮಾಡಿಲ್ಲ. ಆದುದರಿಂದ ಸಾಧ್ಯವಾದಮಟ್ಟಿಗೆ ನಾಲ್ಕನೆ ಯೋಜನೆಯಲ್ಲಾದರೂ ಇದನ್ನು ಸೇರಿಸುತ್ತೀವೆ ಎಂದು ಸರಕಾರದ ಕಡೆಯಿಂದ ಭರವಸೆ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕೆ ನಾನು ಆಗಲೇ ಉತ್ತರ ಹೇಳಿದೆ. ಇನ್ನೂ ನಾಲ್ಕನೆ ಯೋಜನೆ ಫೈನಲೈಜು ಆಗಿಲ್ಲ. ಅದು ಆಗುವಾಗ ಪರಿಶೀಲನೆ ಮಾಡಬೇಕಾಗುತ್ತದೆ. ಇವತ್ತೇ ಇದರ ಬಗ್ಗೆ ಹೇಳುವುದು ಕಷ್ಟ.

2-00 P.M.

ಶ್ರೀ ಎಸ್. ಎ. ಅಗ್ನಿಹೋತ್ರಿ.—ಕಲಘಟಗಿಯಲ್ಲಿ ಮಾಡದೇ ಇದ್ದರೆ ಧಾರವಾಡದಲ್ಲಾದರೂ ತೆಗೆದುಕೊಳ್ಳುತ್ತೀರಾ ?

(ಉತ್ತರವಿಲ್ಲ.)

Reinstatement of sales officer in Spun Silk Mills, Channapatna

30. Sri T. V. KRISHNAPPA (Channapatna).—

Will the Minister for Agriculture be pleased to state :—

(*a*) whether they are aware that a dismised sales officer has been reinstated in Spun Silk Mills, Channapatna ;

(*b*) the reason for his dismissal ;

(*c*) the service he had put in formerly ;

(*d*) the pay he was drawing formerly and the present pay ?

A.—Sri B. RACHAIAH (Minister for Agriculture).—

(*a*) No dismissed sales Officer is reinstated in its strict sense. One Sri K. V. Nanjundaiah who was in charge of the Bangalore Show Room of Erstwhile Joint Stock Company, *viz.*, Mysore Spun Silk

Mills Ltd., was dismissed by an order dated 10th June 1958, but his dismissal was converted into resignation in accordance with a compromise arrived at in the Industrial Dispute raised in this behalf before the Industrial Tribunal by an award dated 1st December 1960. He has been appointed as I Division Clerk in the Office of Government Spun Silk Mills with effect from 9th March 1964.

(*b*) He tendered his resignation on account of some allegation about the shortages in the stock in the Bangalore Show Room of the Erstwhile Mysore Spun Silk Mills, Ltd.

(*c*) About 20 years.

(*d*) He was drawing formerly Rs. 150+D. A. and his present pay is Rs. 180 plus D. A.

ಶ್ರೀ ಜಿ. ಎ. ಕೃಷ್ಣಪ್ಪ.—ಆಪಾದನೆಗಳಿಗೊಳಗಾಗಿದ್ದ ಅಧಿಕಾರಿಗಳನ್ನು ಪುನಃ ಕೆಲಸಕ್ಕೆ ತೆಗೆದುಕೊಂಡದ್ದು ಸರಿಯೇ ?

†ಶ್ರೀ ಬಿ. ರಾಚಯ್ಯ.—ಇವರು ಹಿಂದೆ ಒಂದು ಪ್ರೈವೇಟು ಕಂಪನಿಯಲ್ಲಿದ್ದು ತಪ್ಪು ಮಾಡಿದ್ದರು ಎನ್ನುವುದು ರುಜುವಾತು ಆಗಿಲ್ಲ ಎಂದು ಟ್ರೈಬ್ಯುನರ್‌ರವರೂ ಹೇಳಿದ್ದರಿಂದ ಮತ್ತು ಇವರ ಮೇಲೆ ಯಾವ ಚಾರ್ಜುಗಳೂ ಇಲ್ಲ ಎಂದು ತಿಳಿದುದರಿಂದ ಇವರನ್ನು ನೇಮಕ ಮಾಡ ರಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಆಪಾದನೆಗಳು ರುಜುವಾತಾಗಲಲ್ಲ ಎಂದು ಕಾಂಪ್ರಮೈಸು ಮಾಡಿಕೊಂಡು ಇವರನ್ನು ತೆಗೆದುಕೊಂಡಿದ್ದಾರೆಯೋ ಹೇಗೆ ಎನ್ನುವುದು ಸರಿಯಾಗಿ ಗೊತ್ತಾಗಲಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟಪಡಿಸಬೇಕು.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರ ಜಡ್ಜ್‌ಮೆಂಟು ಏನಿದೆ ಅದನ್ನು ಪೂರ್ಣವಾಗಿ ಓದಿದರೆ ಅವರಿಗೇ ಗೊತ್ತಾಗುತ್ತದೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಸರಕಾರ ಈ ಅಧಿಕಾರಿಯ ಮೇಲೆ ತಪ್ಪಿದೆ ಎಂದು ಇವರನ್ನು ಡಿಸ್‌ಮಿಸ್ ಮಾಡಬೇಕು ಎಂದು ಹಿಂದೆ ಏನಾದರೂ ತೀರ್ಮಾನವನ್ನು ತೆಗೆದು ಕೊಂಡಿದ್ದರೇ ?

ಶ್ರೀ ಬಿ. ರಾಚಯ್ಯ.—ಸರಕಾರ ತೀರ್ಮಾನ ಏನೂ ತೆಗೆದುಕೊಂಡಿಲ್ಲ. ಹಿಂದೆ ಇದು ಪ್ರೈವೇಟು ಕಂಪನಿಯಾಗಿತ್ತು. ಅಲ್ಲಿ ಕೆಲವು ಷಾರ್ಜ್‌ಗಳು ಆಗಿತ್ತು ಎಂದು ಇವರ ಮೇಲೆ ವಿಚಾರಣೆ ಮಾಡಿ ಇವರನ್ನು ಡಿಸ್‌ಮಿಸ್ ಮಾಡಬೇಕೆಂದು ಆ ಕಂಪನಿಯವರು ಮಾಡಿದ್ದರು. ಅದರ ಮೇಲೆ ಟ್ರಿಬ್ಯುನರ್‌ಗೆ ಇವರು ಅಪೀಲು ಹೋದಾಗ ಇವರಿಬ್ಬರಿಗೂ ಒಂದು ರೀತಿಯಾದ ಕಾಂಪ್ರ ಮೈಸು ಆಗಿ ಇವರ್ಮೇಲೆ ಯಾವ ಆಪಾದನೆ ಇಲ್ಲವೆಂದಾಯಿತು.

ಶ್ರೀ ಕೆ. ಹೆಚ್. ರಂಗನಾಥ.—ಕಾಂಪ್ರಮೈಸು ಮಾಡಿ ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕು ಎನ್ನುವಂತಹ ನಿದರ್ಶನಗಳು ಹಿಂದೆ ಇತ್ತೇ ? ಇದನ್ನು ರೆಸಿಗ್ನೇಷನ್ ಎಂದು ಪರಿಗಣಿಸಬೇಕು ಎಂದು ಟ್ರಿಬ್ಯುನಲ್ ಅವಾರ್ಡ್ ಕೊಟ್ಟಿದೆಯೇ ?

ಶ್ರೀ ಬಿ. ರಾಚಯ್ಯ.—ಇದು ಕಾಂಪ್ರಮೈಸು ಎನ್ನುವ ರೀತಿಯಲ್ಲಿ ಇದ್ದು ರಾಜೀನಾಮೆ ಎಂದು ಭಾವಿಸಬೇಕು ಎಂದು ನಿರ್ದೇಶನವಿತ್ತು.

ಶ್ರೀ ಕೆ. ಹೆಚ್. ರಂಗನಾಥ.—ಹಾಗೇನೂ ಇಲ್ಲದಿದ್ದರೆ ಇವರನ್ನು 150 ರೂಪಾಯಿಗಳ ಸಂಬಳದ ಮೇಲೆ ತೆಗೆದುಕೊಳ್ಳದೆ ಇದಕ್ಕಾಗಿ 180 ರೂಪಾಯಿಗಳ ಸಂಬಳ ಕೊಟ್ಟು ನೇಮಕ ಮಾಡಲು ಇದ್ದ ಕಾರಣಗಳೇನು ?

ಶ್ರೀ ಬಿ. ರಾಚಯ್ಯ.—ಇದು ರನ್ನಿಂಗು ಗ್ರೇಡ್. ಅದರಂತೆ ಇವನ್ನು ಕೊಡರಾಗಿದೆ.

ಶ್ರೀ ಎನ್. ಎ. ಚನ್ನೇಗೌಡ.—ಒಬ್ಬ ಅಧಿಕಾರಿಯನ್ನು ಕೆಲಸದಿಂದ ವಜಾ ಮಾಡಿದಮೇಲೆ ಅವನನ್ನು ಪುನಃ 1964 ರಲ್ಲಿ ರೀಇನ್‌ಸ್ಟೇಟು ಮಾಡರಾಗಿದೆ. ಇದರಿಂದ ಇವರಿಗೆ ಬ್ಯಾಕ್ ವೇಜಸ್‌ಗಳನ್ನೆಲ್ಲಾ ಕೊಡರಾಗಿದೆಯೇ ? ಇವರ ಬಗ್ಗೆ ಯಾವ ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಇದು ಪೊದಲು ಪ್ರೈವೇಟ್ ಜಾಯಿಂಟು ಸ್ಟಾಕ್ ಕಂಪನಿಯಾಗಿತ್ತು. ಆಗ ಕಂಪನಿಯವರು ಇವರನ್ನು ಡಿಸ್‌ಮಿಸ್ ಮಾಡಿದ್ದರು. ಇದರ ಮೇಲೆ ಅಪೀಲು ಟ್ರಿಬ್ಯುನರ್‌ಗೆ ಹೋಗಿ ಅಲ್ಲಿ ಅದು ಅಲ್ಲಿ ರಾಜೀನಾಮೆ ಎಂದು ಆರ್ಡರಾದ ಮೇಲೆ ಇವರನ್ನು ಸರಕಾರ ಅವರು ಹೇಳಿದ ಕಾಂಪ್ರಮೈಸು ಮೇಲೆ ನೇಮಕ ಮಾಡರಾಗಿದೆ. ಇದರಲ್ಲಿ ಸರಕಾರ ಯಾವ ಚಾರ್ಜು ಗಳನ್ನು ಕೊಟ್ಟಿಲ್ಲ.

Sri H. SIDDAVEERAPPA.—May I know from the Government whether this man against whom there were a number of complaints is not an arch enemy of the factory and his mismanagement was responsible for bringing the factory into trouble ? In spite of all these grave allegations, what is the attachment the Government has for this man ? Is it a fact that this person is a friend of the local Congressman there and under his influence this person is again reinstated ?

Sri B. RACHAIAH.—No. I do not think the local Congressman has influenced me or the Director of the Spun Silk Mills.

ಶ್ರೀ ಎಸ್. ಶಿವಪ್ಪ.—ಈ ಮನುಷ್ಯ ಪೊದಲು ಬೆಂಗಳೂರು ಪೋ ರೂರ್ಲ್ಲಿದ್ದ. ಅಲ್ಲ ಸಾಕಷ್ಟು ದುಂದು ಹಾಗೂ ಅಪವ್ಯವಹಾರವನ್ನು ಮಾಡಿ ಅದನ್ನು ಮುಚ್ಚಿಸಿದ್ದಾಯಿತು. ಈಗ ಪುನಃ ಅದೇ ವ್ಯಕ್ತಿಯನ್ನು ಚೆನ್ನಪಟ್ಟಣ ಸಿರ್ಕ್‌ಹೌಸಿನಲ್ಲಿ ಕೆಲಸಕ್ಕೆ ನೇಮಕ ಮಾಡಿಕೊಳ್ಳರಾಗಿದೆ, ಈತನು ನಾನ್ ಎಸ್. ಎಸ್. ಎರ್. ಸಿ. ಇಂಥವನನ್ನು ಹೇಗೆ ನೇಮಕಮಾಡಿಕೊಂಡರು ?

ಶ್ರೀ ಬಿ. ರಾಚಯ್ಯ.—ಹಿಂದೆ ಮಿಸ್‌ಮ್ಯಾನೇಜ್ ಮಾಡಿದವನನ್ನು ಈಗ ಕೆಲಸಕ್ಕೆ ನೇಮಕ ಮಾಡಿಕೊಂಡರು ಎಂದು ಹೇಳಲು ಸಾಧ್ಯವಿಲ್ಲ. ನಾನು ಯಾವುದನ್ನೂ ಮುಚ್ಚಿಹಾಕುತ್ತಿಲ್ಲ. ಹಿಂದೆ ಶ್ರೀಮಾನ್ ಎಚ್. ಸಿದ್ದವೀರಪ್ಪನವರು ಮಂತ್ರಿಗಳಾಗಿದ್ದ ಕಾಲಕ್ಕೆ ಇವರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳರಾಗಿತ್ತು.....

Sri H. SIDDAVEERAPPA.—I took him then. Thereafter there were a number of complaints against him. Now a man who was dismissed has again been reinstated by this Government !

Sri B. RACHAIAH.—We cannot disregard the tribunal award which is already there.

Mr. DEPUTY SPEAKER.—Question time is over.

QUESTION FOR ANSWER ON THE DAY

(but not taken up)

Sale of levy collected in South Kanara District

21. Sri SUBBARAO HALSNAD (Bindur).—

Will the Minister of State for Food and Civil Supplies be pleased to state :—

(*a*) whether it has come to their notice that the paddy collected last year through levy in Coondapur Taluk, South Kanara District shown as stored in godowns was sold at better rates in the rainy season and a possible quantity of paddy was replaced after the new crop and the rest was shown as destroyed in the accounts ;